ಶ್ರೀ ಜಿ. ನಾರಾಯಣಕುಮಾರ್.—ನಮ್ಮ ಸರಕಾರದ ನೀತಿ ಕನ್ನಡ ಆಡಳಿತ ಭಾಷೆ ಆಗ ಬೇಕಾಬುದು ಮಾನ್ಯ ಬಂಗಾರಪ್ಪನವರು ಕನ್ನಡದ ಅಭಿಮಾನಿಗಳು, ಕನ್ನಡದಲ್ಲಿ ಒಳ್ಳೆಯ ಭಾಷಣಕಾರರು, ಅವರು ಇಂಗ್ಲಿಷ್‌ನಲ್ಲಿ ಓದುತ್ತಿದ್ದಾರೆ,

ಅಧ್ಯಕ್ಷರು.—ಅವರು ನನ್ನ ಪರವಾನಗಿ ತೆಗೆದುಕೊಂಡು ಇಂಗ್ಲಿಷ್‌ನಲ್ಲಿ ಓದಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್. ನಾನು ಬಂಗಾರಪ್ಪನವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ನಾರಾಯಣಕುಮಾರ್‌ರವರೂ ನಾವು ನಿನ್ನೆ ಅರ್ಧ ಗಂಟೆ ಕಾಲ ಇಂಗ್ಲೀಷ್‌ನಲ್ಲಿ ಮಾತನಾಡಿದ್ದೇವೆ, ಅವರು ಒಂದು ಕನ್ನಡ ಪದವನ್ನೂ ಬಳಸಲಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರು ಸತ್ಯಕ್ಕೆ ದೂರವಾದ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಆರ್. ಯಾವಗಲ್(ಗ್ರಾಮೀಣ ಅಭಿವೃದ್ಧಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ಸಭೆಯ ಗಮನಕ್ಕೆ ತಂದ ವಿಷಯದ ಬಗ್ಗೆ ಮಾಹಿತಿಗಳು ಇಲ್ಲ. ಆದರೆ ಅವರು ಎತ್ತಿದಂಥ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಅವರಿಗೆ ಪ್ರತ್ಯೇಕವಾದ ಹೇಳಿಕೆ ಬೇಕೆಂದು ಹೇಳಿದರೆ ತರಿಸಿಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಬೇಕು ಬೇಡ ಎಂಬ ಪ್ರಶ್ನೆ ಅಲ್ಲ. ಹೇಳಿಕೆ ಕೊಡಿ ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ನಮ್ಮ ನಿಮ್ಮ ಪತ್ರವ್ಯವಹಾರ ಅಲ್ಲ ಇದು. ಈ ಸದನದಲ್ಲಿ ನಾವು ಹೇಳಿದಮೇಲೆ ಸದನದಲ್ಲೇ ಉತ್ತರ ಕೊಡಬೇಕು. ಇಲ್ಲೇ ಹೇಳಬೇಕು.

ಅಧ್ಯಕ್ಷರು.—ಸದನದಲ್ಲೇ ಉತ್ತರ ತರಿಸಿಕೊಡಿ.

ಶ್ರೀ ಬಿ. ಆರ್. ಯಾವಗಲ್.—ನನ್ನ ಹೇಳಿಕೆಯ ಮೇಲೆ ಅವರಿಗೆ ಸಮಾಧಾನವಾಗಬಹುದೆ ಎಂದು ತಿಳಿದುಕೊಂಡಿದ್ದೆ, ಹೇಳಿಕೆ ಬೇಕಾಗಿದ್ದರೆ ತರಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎರಡು ಮೂರು ದಿವಸ ಆಯಿತು, ಮಾನ್ಯ ಸಹಕಾರ ಮಂತ್ರಿಗಳಿಗೆ ಮೂರು ನಾಲ್ಕು ಸಿಹಿಳರ ನೋಟೀಸು ಕಳುಹಿಸಿದ್ದೆ.

ಅಧ್ಯಕ್ಷರು.—ತಾವು ಓದಿ ಹೇಳಿ, ಎರಡು ದಿವಸದಲ್ಲಿ ಉತ್ತರ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಕ್ಕರೆ ಕಾರ್ಖಾನೆ ಮೊಲಾಸಿಸ್ ಬಗ್ಗೆ ನಿಯಮದ ಸಿಹಿಳರ ಮೇಲೆ ನೋಟೀಸ್ ಕೊಟ್ಟಿದ್ದೇನೆ, ಇನ್ನೂ ಬಂದಿಲ್ಲ,

ಅಧ್ಯಕ್ಷರು.—ಈಗ ನಿಮ್ಮ ಸಿಹಿಳರ ನೋಟೀಸ್ ಓದಿ ಹೇಳಿರಿ.

೧-೦೦ ಪಿ. ಎಂ.

೧೬. ನೀರಾವರಿ ಪಂಪುಸೆಟ್‌ಗೆ ವಿಧಿಸಿರುವ ವಿದ್ಯುತ್‌ದರದ ಬಗ್ಗೆ

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ರಾಜ್ಯದಲ್ಲಿಯ ಎಲ್ಲ ರೈತಾಪಿ ಜನಕ್ಕೆ ಪ್ರತಿ ಅಶ್ವಶಕ್ತಿಗೆ ಐವತ್ತು ರೂಪಾಯಿ ವಾರ್ಷಿಕ ಬಿಲ್ಲನ್ನು ತುಂಬುವಂತೆ ಆದೇಶಿಸಿ ಹತ್ತು ಅಶ್ವಶಕ್ತಿಯ ಎಲೆಕ್ಟ್ರಿಕ್ ಮೋಟಾರ್‌ಗಳಿಗೆ ವಿದ್ಯುತ್ ಮೋಟಾರ್‌ಗಳನ್ನು ಅಳವಡಿಸುತ್ತಿರುವುದು ಬರಗಾಲದಲ್ಲಿ ಸಿಕ್ಕಿರುವ ರೈತವರ್ಗಕ್ಕೆ ತುಂಬಾ ತೊಂದರೆಯನ್ನುಂಟುಮಾಡಿದೆ. ಪಕ್ಕದ ರಾಜ್ಯದಲ್ಲಿ ಅಂದರೆ ಮಹಾರಾಷ್ಟ್ರದಲ್ಲಿ ನೀರಾವರಿ ಪಂಪ್‌ಸೇಟ್‌ಗಳಿಗೆ ಇರುವ ಮಾದರಿ ಕರ್ನಾಟಕದಲ್ಲಿ ಕೂಡ ಆಚರಣೆಗೆ ತಂದು ಎಷ್ಟೇ ಅಶ್ವಶಕ್ತಿಯ ನೀರಾವರಿ ಪಂಪ್‌ಸೆಟ್‌ಗಳು ಇದ್ದರೂ ವಾರ್ಷಿಕ ಒಂದು ಅಶ್ವಶಕ್ತಿಗೆ ರೂಪಾಯಿ ಐವತ್ತರಂತೆ ಆಕಾರಣೆ ಮಾಡಿ ರೈತವರ್ಗಕ್ಕೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ನಾನು ಒತ್ತಾಯಿಸುತ್ತೇನೆ, ಕೆ. ಇ. ಬಿ. ಯಿಂದ ಅಥವಾ ಸರ್ಕಾರದಿಂದ ಕೊಟ್ಟಿರುವ ಆದೇಶವನ್ನು ಹಿಂದೆ ತೆಗೆದುಕೊಂಡು ಪ್ರತಿ ಅಶ್ವಶಕ್ತಿಗೆ ರೂಪಾಯಿ ಐವತ್ತರಂತೆ ಆಕರಣೆ ಮಾಡುವಂತೆ ಆದೇಶಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳುವಂತೆ ಈ ಸೂಚನೆಯನ್ನು ನೀಡುತ್ತೇನೆ ಹಾಗೂ ಈ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳಿಂದ ಸದನದಲ್ಲಿ ಹೇಳಿಕೆ ನೀಡುವಂತೆ ಸಾರ್ವಜನಿಕರ ಪರವಾಗಿ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಸಚಿವರು) —ದಿನಾಂಕ ೨೭-೯-೮೫ರ ಮುಂಜೆ ೧೦ ಅಶ್ವಶಕ್ತಿ (೧೦ ಅಶ್ವಶಕ್ತಿಯೂ ಸೇರಿದಂತೆ)ಯ ನೀರಾವರಿ ಪಂಪುಸೆಟ್ಟುಗಳ ಗ್ರಾಹಕರಿಗೆ ಅಶ್ವಶಕ್ತಿಯ ಆಧಾರದ ಮೇಲೆ ರೂ. ೫೦ ವಿದ್ಯುತ್ ಶುಲ್ಕವನ್ನು ವಿಧಿಸಲಾಗುತ್ತಿತ್ತು. ಈ ವರ್ಗದ ಬಳಕೆದಾರರಿಗೆ ಮೀಟರ್‌ಗಳನ್ನು ಅಳವಡಿಸಲಾಗುತ್ತಿರಲಿಲ್ಲ. ದಿನಾಂಕ ೨೭-೯-೮೫ ರಂದು ಜಾರಿಗೆ ಬಂದ ಪರಿಷ್ಕೃತ ವಿದ್ಯುತ್ ಶುಲ್ಕದಂತೆ ೧೦ ಅಶ್ವಶಕ್ತಿಯ ಪಂಪುಸೆಟ್ಟುಗಳ ಗ್ರಾಹಕರಿಗೆ ಈ ರಿಯಾಯಿತಿ ಒದಗಲಿಲ್ಲ. ಅಪರೂಪಗಳ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸಿ ಅವರುಗಳು ಬಳಸುವ ಪ್ರತಿ ಯೂನಿಟಿಗೂ ೨೨ ಪೈಸೆ ವಿದ್ಯುತ್ ಶುಲ್ಕವನ್ನು ವಿಧಿಸಲಾಗಿತ್ತು. ಆದರೆ ಸರ್ಕಾರ ಈ ವಿಚಾರವನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿ ದಿನಾಂಕ ೫-೧೦-೮೫ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಪತ್ರವನ್ನು ಬರೆದು ತಿದ್ದುಪಡಿ ಮಾಡಿ ೧೦ ಅಶ್ವಶಕ್ತಿ ಪಂಪುಸೆಟ್ಟಿನ ಗ್ರಾಹಕರಿಗೂ ಸೇರಿದಂತೆ ಅಶ್ವಶಕ್ತಿಯ ಆಧಾರದ ಮೇಲೆ ಈಗಿರುವ ವಿದ್ಯುತ್ ಶುಲ್ಕವನ್ನು ಅಂದರೆ, ಒಂದು ಅಶ್ವಶಕ್ತಿಗೆ ೭೫ ರೂಪಾಯಿಗಳನ್ನು ಕೊಡುವಂತೆ ಆದೇಶ ನೀಡಲಾಗಿದೆ. ಇದರಿಂದ ೧೦ ಅಶ್ವಶಕ್ತಿಗೆ ನೀರಾವರಿ ಮೋಟಾರುಗಳನ್ನು ಉಪಯೋಗಿಸುವ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಿದೆ.

ಟ್ಯಾರಿಫ್ ಸಮಿತಿಯು ಎಲ್ಲಾ ವಿಚಾರಗಳನ್ನು ಪರಿಶೀಲಿಸಿ, ಅವರು ಕಳುಹಿಸಿದ ಶಿಫಾರಸ್ಸುಗಳ ಮೇಲೆ ಸರ್ಕಾರ, ನೆರೆ ರಾಜ್ಯಗಳಲ್ಲಿ ವಿಧಿಸುತ್ತಿರುವ ವಿದ್ಯುತ್ ದರಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ವಿದ್ಯುತ್ ಉತ್ಪಾದನಾ ವೆಚ್ಚ ಜಾಸ್ತಿಯಾಗಿ ಆದಾಯ ಕಡಿಮೆ ಬರುತ್ತಿದ್ದುದರಿಂದ, ವಿದ್ಯುತ್ ದರಗಳನ್ನು ಎಲ್ಲಾ ವರ್ಗದ ಜನರಿಗೆ ಹೆಚ್ಚುವರಿ ಮಾಡಿದಾಗ, ನೀರಾವರಿ ವಿದ್ಯುಚ್ಛಕ್ತಿ ಪಂಪುಸೆಟ್ಟುಗಳಿಗೂ ಸಹ ವಿಸ್ತಾರವಾದಲ್ಲಿ ಸ್ವಲ್ಪ ಮಟ್ಟಿಗೆ ವಿದ್ಯುತ್ ದರಗಳನ್ನು ಹೆಚ್ಚುಮಾಡಲಾಗಿದೆ, ವಿದ್ಯುಚ್ಛಕ್ತಿ ಮಂಡಳಿಯು ಗ್ರಾಹಕರಿಗೆ ಉತ್ತಮ ರೀತಿಯ ಸೇವೆ ಮಾಡಲು, ಮಂಡಳಿಯೂ ನಷ್ಟ ಹೊಂದದೆ ಕೆಲಸಮಾಡಲು ಈ ವಿದ್ಯುತ್ ದರಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚುಪರಿ ಮಾಡಲಾಗಿದೆ. ವಿದ್ಯುತ್ ಸರಬರಾಜು ಕಾಯಿದೆ ೧೯೪೮ರ ಮೇರೆಗೆ ವಿದ್ಯುಚ್ಛಕ್ತಿ ಮಂಡಳಿ ಕನಿಷ್ಠ ಶೇಖಡಾ ೩ರಷ್ಟು ಆದಾಯ ಗಳಿಸಲೇಬೇಕು ಎಂಬ ನಿಯಮವನ್ನು ಮಾಡಿದೆ.

೧೭. ಹಿರಿಯೂರು ತಾಲ್ಲೂಕಿನ ಹಳ್ಳಿಗಳಿಗೆ ಮತ್ತು ನೀರಾವರಿ ಪಂಪುಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಬಗ್ಗೆ

ಶ್ರೀ ಆರ್. ರಾಮಯ್ಯ (ಹಿರಿಯೂರು),—ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕಿನಲ್ಲಿರುವ ೧೪೬ ರೆವಿನ್ಯೂ ಗ್ರಾಮಗಳಲ್ಲಿ ಉಳಿದಿರುವ ೨೨ ರೆವಿನ್ಯೂ ಗ್ರಾಮಗಳಿಗೆ ವಿದ್ಯುತ್ ಮಂಜೂರಾಗಿದ್ದು, ವರ್ಕ್ ಆರ್ಡರ್ ದೊರೆತಿದ್ದು, ಕೆಲಸ ಪ್ರಾರಂಭಿಸಲು ಮೆಟೀರಿಯಲ್ ಕೊರತೆಯನ್ನು ಇಲಾಖಾಧಿಕಾರಿಗಳು ಮಂಜೂರು ಪರ್ಷಕಿಂತಲೂ ಹೆಚ್ಚಾಗಿದೆ. ಜೊತೆಗೆ, ವಾಣಿವಿಲಾಸ ಸಾಗರದ ಆಚ್ಚುಕಟ್ಟು ಪ್ರದೇಶದಲ್ಲಿರುವ ಫಸಲುಗಳನ್ನು ಕಾಪಾಡಿಕೊಳ್ಳಲು ತೊಡಿಕೊಂಡಿರುವ ಭಾವಿಗಳಿಗೂ ವಿದ್ಯುತ್ ಸಂಪರ್ಕ ಪಡೆಯಲು ವಿಳಂಬವಾಗುತ್ತದೆ. ಈ ಮೆಟೀರಿಯಲ್ ಕೊರತೆಯಿಂದಲೇ ವಿದ್ಯುತ್ ಸರಬರಾಜನ್ನು ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ಉತ್ತರ ನೀಡುತ್ತಿದ್ದಾರೆ. ಪ್ರಯುಕ್ತ, ತಾಲ್ಲೂಕಿನ ಬೇಡಿಕೆ ಇರುವ ಎಲ್ಲಾ ಮೆಟೀರಿಯಲ್ಸ್ ಒದಗಿಸಲು ಸಂಬಂಧಿಸಿದ ಅಧಿಕಾರಿಗಳಿಂದ ಬಂದ ಪತ್ರದ ಮೇರೆಗೆ ಅವುಗಳನ್ನು ಕಳುಹಿಸಲು ಯತ್ನ ಸಾಗಿದೆಯೇ, ಇದರೊಂದಿಗೆ ತಾಲ್ಲೂಕಿನಲ್ಲಿರುವ ೧೫೭ ತಾಂಡಗಳಲ್ಲಿ ವಿದ್ಯುತ್ ದೊರೆಯದೇ ಇರುವ ಸಂಖ್ಯೆ ಎಷ್ಟು, ಇವುಗಳಿಗೆ ತಕ್ಷಣ ವಿದ್ಯುತ್ತನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ, ಕಳೆದ ವರ್ಷವೂ ಈ ತಾಂಡಗಳಿಗೆ ವಿದ್ಯುತ್ ಪೂರೈಸಿಕೊಡುವ ಭರವಸೆಯನ್ನು ಸರಕಾರದವರು ಕೊಟ್ಟಿದ್ದರು. ನಾನು ಸಲ್ಲಿಸಿದ ತಾಂಡಗಳ ಪಟ್ಟಿಯಲ್ಲಿ ಯಾವ ತಾಂಡಗಳಿಗೂ ವಿದ್ಯುತ್ ಪೂರೈಕೆ ಆಗಿಲ್ಲ. ಈಗಲಾದರೂ ಸರ್ಕಾರ ಇದನ್ನು ನಡೆಯಿಸಿಕೊಡುವುದೆಂದು ನಂಬುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಸಚಿವರು)— ಈ ಬಗ್ಗೆ ವಿವರಗಳು ಬಂದಿಲ್ಲ. ಬಂದ ಕೂಡಲೇ ತರಿಸಿಕೊಡುತ್ತೇನೆ.